CS (Main) Exam, 2020

URC-B-KND

# ಕನ್ನಡ / KANNADA

## ಪತ್ರಿಕೆ II / Paper II

## (ಸಾಹಿತ್ಯ) / ( LITERATURE )

ವೇಳೆ : ಮೂರು ಗಂಟೆ
*Time Allowed : **Three** Hours*

ಗರಿಷ್ಠ ಅಂಕಗಳು : **250**
*Maximum Marks : **250***

---

### ಪ್ರಶ್ನೆ ಪತ್ರಿಕೆ ವಿಶೇಷ ಸೂಚನೆಗಳು

**ದಯವಿಟ್ಟು ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಕೆಳಗಿನ ಪ್ರತಿಯೊಂದು ಸೂಚನೆಗಳನ್ನು ಸರಿಯಾಗಿ ಓದಿರಿ :**

ಇದರಲ್ಲಿ **ಎಂಟು** ಪ್ರಶ್ನೆಗಳಿದ್ದು **ಎರಡು** ಭಾಗಗಳಲ್ಲಿ ವಿಂಗಡಿಸಲಾಗಿದೆ.

ಅಭ್ಯರ್ಥಿಗಳು ಎಲ್ಲಾ ಪ್ರಶ್ನೆಗಳಲ್ಲಿ **ಐದು** ಪ್ರಶ್ನೆಗಳಿಗೆ ಉತ್ತರಿಸಬೇಕು.

ಅಭ್ಯರ್ಥಿಗಳು ಪ್ರಶ್ನೆಗಳ ಸಂಖ್ಯೆ **1** ಮತ್ತು **5**ಕ್ಕೆ ಉತ್ತರಿಸುವುದು ಕಡ್ಡಾಯ, ಮತ್ತು ಇನ್ನುಳಿದ **ಮೂರು** ಪ್ರಶ್ನೆಗಳಲ್ಲಿ ಪ್ರತಿಯೊಂದು ವಿಭಾಗದಿಂದ ಕನಿಷ್ಠ **ಒಂದು** ಪ್ರಶ್ನೆಗಾದರೂ ಉತ್ತರಿಸಬೇಕು.

ಪ್ರತಿಯೊಂದು ಪ್ರಶ್ನೆಗಳಿಗಿರುವ ಅಂಕಗಳನ್ನು ಆಯಾ ಪ್ರಶ್ನೆಗಳ ಮುಂದೆಯೇ ನಮೂದಿಸಲಾಗಿದೆ.

ಉತ್ತರಗಳನ್ನು ಅತ್ಯಗತ್ಯವಾಗಿ **ಕನ್ನಡದಲ್ಲೇ (ಕನ್ನಡ ಲಿಪಿಯಲ್ಲೇ)** ಬರೆಯಬೇಕು.

ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ನಿರ್ದಿಷ್ಟಪಡಿಸಿದ ಶಬ್ದಗಳ ಮಿತಿಯನ್ನು ಸರಿಯಾಗಿ ಪಾಲಿಸಬೇಕು.

ಉತ್ತರಿಸಿದ ಪ್ರಶ್ನೆಗಳನ್ನು ಕ್ರಮಬದ್ಧವಾಗಿ ಪರಿಗಣಿಸಿ ಎಣಿಕೆ ಮಾಡಲಾಗುವುದು. ಅಪೂರ್ಣ ಉತ್ತರಗಳನ್ನು ಹೊಡೆದು ಹಾಕದಿದ್ದಲ್ಲಿ ಅವುಗಳನ್ನು ಎಣಿಕೆಯಲ್ಲಿ ಪರಿಗಣಿಸಲಾಗುತ್ತದೆ. ಪ್ರಶ್ನೋತ್ತರ ಸಹಿತವಾಗಿರುವ ಪುಸ್ತಿಕೆಯಲ್ಲಿ ಬರೆಯದೆ ಉಳಿದ ಪೂರ್ಣ ಖಾಲಿ ಪುಟಗಳನ್ನು ಮತ್ತು ಭಾಗಶಃ ಖಾಲಿ ಇರುವ ಪುಟಗಳನ್ನು ಸ್ಪಷ್ಟವಾಗಿ ಹೊಡೆದು ಹಾಕಬೇಕು.

### Question Paper Specific Instructions

***Please read each of the following instructions carefully before attempting questions :***

*There are **EIGHT** questions divided in **TWO SECTIONS**.*

*Candidate has to attempt **FIVE** questions in all.*

*Questions no. **1** and **5** are compulsory and out of the remaining, any **THREE** are to be attempted choosing at least **ONE** question from each section.*

*The number of marks carried by a question / part is indicated against it.*

*Answers must be written in **KANNADA (Kannada script)**.*

*Word limit in questions, wherever specified, should be adhered to.*

*Attempts of questions shall be counted in sequential order. Unless struck off, attempt of a question shall be counted even if attempted partly. Any page or portion of the page left blank in the Question-cum-Answer Booklet must be clearly struck off.*

---

## SECTION A

**Q1.** **ಈ ಕೆಳಗಿನ ಪದ್ಯಗಳ ಸಂದರ್ಭವನ್ನು ಸೂಚಿಸಿ ಅವುಗಳ ಭಾವ ಮತ್ತು ಸ್ವಾರಸ್ಯವನ್ನು ಕುರಿತು ಬರೆಯಿರಿ. (ಪ್ರತಿಯೊಂದೂ 150 ಪದಗಳ ಉತ್ತರ ಮಿತಿಯಲ್ಲಿ)** *10×5=50*

(a) ಒಡಲೆರಡೊಂದೆ ಜೀವಮಿವರ್ಗೆಂಬುದನೆಂಬುದು ಲೋಕಮೀಗಳಾ
ನುಡಿ ಪುಸಿಮಾಯ್ತು ನಿನ್ನಸು ಕಿರೀಟಿಯ ಶಾತಶರಂಗಳಿಂದೆ ಪೋ
ಪೊಡಮೆನಗಿನ್ನು ಮೀಯೊಡ ಲೊಳಿರ್ದುದು ನಾಣಿಲಿಜೀವಮೆಂದೊಡಾ
ವೆಡೆಯೊಳೆ ನಿನ್ನೊಳೆನ್ನ ಕಡುಗೂರ್ಮೆಯುಮಟ್ಟಿಯುಮಂಗವಲ್ಲಭಾ ॥ *10*

(b) ನಡೆ ನಿನ್ನ ಮೂಲಪತ್ರವನೆನಗೆ ತೋರೆನುತೆ
ಇರೆ ತೋರ್ಪೆನೆನ್ನೊಡನೆ ಬಾರಾ ಮಗನೆಯೆಂದು
ಹರನಲ್ಲಿ ವೃದ್ಧನಂತೊಪ್ಪಿ ನಡೆಗೊಳಲಂದು
ನಡೆತಂದನಲ್ಲಿ ಕಾಲ್ನಡೆಯೊಳಗೆ ಸೌಂದರಂ ॥ *10*

(c) ಎಲೆ ಧನಂಜಯ ನೀನು ಹಿಮಕರ
ಕುಲದ ಸುಕುಮಾರಕನು ಲೋಕದ
ಕುಲ ವಿಹೀನನು ಕರ್ಣನಿವ ನಿನಗೆಂತು ಸರಿಯಹನು ।
ತಲೆಯಮಾರಿ ಶರೀರವನು ಸಲೆ
ಸಲಹಲೋಸುಗ ಕೌರವನ ತಂ
ಬುಲಕೆ ಕಯ್ಯಾಂತವನು ಬಂಧುವೆ ಪಾರ್ಥ ಹೇಳೆಂದ ॥ *10*

(d) ಜಲವೆ ಸಕಲಕುಲಕ್ಕೆ ತಾಯಲ್ಲವೆ
ಜಲದ ಕುಲವನೇನಾದರು ಬಲ್ಲಿರ
ಜಲದ ಬೊಬ್ಬುಳಯಂತೆ ಸ್ಥಿರವಲ್ಲವೀ ದೇಹ
ನೆಲೆಯನರಿತು ನೀ ನೆನೆಕಂಡ್ಯ ಮನುಜ ॥ *10*

(e) ಹಾಲ ನೇಮ, ಹಾಲಕೆನೆಯ ನೇಮ,
ಕೆನೆ ತಪ್ಪಿದ ಬಳಿಕ ಕಿಚ್ಚಡಿಯ ನೇಮ,
ಬೆಣ್ಣೆಯ ನೇಮ, ಬೆಲ್ಲದ ನೇಮ ।
ಅಂಬಲಿಯ ನೇಮದವರನಾರನೂ ಕಾಣೆ,
ಕೂಡಲಸಂಗನ ಶರಣರಲ್ಲಿ –
ಅಂಬಲಿಯ ನೇಮದಾತ ಮಾದರ ಚೆನ್ನಯ್ಯ ॥ *10*

**Q2.** (a) ಸುಕುಮಾರಸ್ವಾಮಿಯ ಕಥೆಯಲ್ಲಿ ವರ್ಣನೆಗೊಂಡ ಅಗ್ನಿಭೂತಿ – ವಾಯುಭೂತಿಯರ ವಿದ್ಯಾವ್ಯಾಸಂಗ ಪ್ರಸಂಗದ ಸ್ವಾರಸ್ಯವನ್ನು ನಿರೂಪಿಸಿರಿ. *20*

(b) 'ಕುಮಾರವ್ಯಾಸನು ಕರ್ಣನ ಪಾತ್ರ ಚಿತ್ರಣದಲ್ಲಿ ತೋರಿದ ಕೌಶಲ್ಯದಿಂದಾಗಿ ಕರ್ಣನ ಮೂರ್ತಿ ಜನತೆಯ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿದುಕೊಂಡಿದೆ' – ಈ ಹೇಳಿಕೆಯ ಔಚಿತ್ಯವನ್ನು ಸೋದಾಹರಣವಾಗಿ ವಿಶ್ಲೇಷಿಸಿರಿ. *20*

(c) ವೀರ ಭರತ – ಸಂಸಾರಿ ಭರತ – ಈ ವೈದೃಶ್ಯಗಳನ್ನು ಭರತೇಶ ವೈಭವಕಾವ್ಯವು ಹೇಗೆ ನಿಭಾಯಿಸಿದೆ ? ಚರ್ಚಿಸಿ. *10*

**Q3.** (a) ಕನಕದಾಸರ ಕೀರ್ತನೆಗಳು ಸಾರುವ ಧರ್ಮ ಮತ್ತು ಸಮಾಜಧರ್ಮಗಳ ಕುರಿತಂತೆ ವಿಶ್ಲೇಷಿಸಿ. *20*

(b) ಭೀಮನು ಪ್ರತಿಜ್ಞೆ ಪೂರೈಸಿ ದ್ರೌಪದಿಯನ್ನು ಸಮಾಧಾನ ಪಡಿಸಿದ ಪರಿಯನ್ನು ಪಂಪ 'ವಿಕ್ರಮಾರ್ಜುನ ವಿಜಯ'ದಲ್ಲಿ ಹೇಗೆ – ಚರ್ಚಿಸಿದ್ದಾನೆ ? ವಿವರಿಸಿರಿ. *20*

(c) ವಚನಗಳಲ್ಲಿ ಕಂಡುಬರುವ ಅನುಭವ ಮತ್ತು ಅನುಭಾವಗಳ ಸ್ವರೂಪದ ಕುರಿತು ಚರ್ಚಿಸಿ. *10*

**Q4.** (a) 'ನಂಬಿಯಣ್ಣನ ರಗಳೆ' ಯಲ್ಲಿ ಶೃಂಗಾರ-ಭಕ್ತಿಗಳ ಸಮ್ಮಿಶ್ರ ಚಿತ್ರವು ಉಜ್ವಲವಾಗಿ ಮೂಡಿ ಬಂದಿದೆ. ಈ ಹೇಳಿಕೆಯನ್ನು ಪರಾಮರ್ಶಿಸಿರಿ. *20*

(b) 'ಭರತೇಶ ವೈಭವ' ಕಾವ್ಯದಲ್ಲಿ ಚಿತ್ರಣಗೊಂಡ ಬಾಹುಬಲಿಯ ಪಾತ್ರವು ಭರತನ ಪಾತ್ರದೆದುರು ಕುಬ್ಜವಾಗಿದೆಯೆ ? ಪರಾಮರ್ಶಿಸಿ. *20*

(c) ಶರಣರ ಭಕ್ತಿ ಮತ್ತು ಸಾಮಾಜಿಕರ ಭಕ್ತಿಯ ಅಂತರಗಳನ್ನು ವಚನ ಸಾಹಿತ್ಯರ ಹಿನ್ನೆಲೆಯಲ್ಲಿ ಗುರುತಿಸಿ. *10*

## SECTION B

**Q5.** ಈ ಕೆಳಗಿನವುಗಳನ್ನು ಕುರಿತು ಟಿಪ್ಪಣಿ ಬರೆಯಿರಿ.
(ಪ್ರತಿಯೊಂದೂ 150 ಪದಗಳ ಉತ್ತರ ಮಿತಿಯಲ್ಲಿ) *10×5=50*

(a) 'ಬೆಟ್ಟದ ಜೀವ' ಕಾದಂಬರಿಯಲ್ಲಿ ಮನುಷ್ಯ-ನಿಸರ್ಗಗಳ ಸಂಬಂಧ. *10*

(b) 'ತುಘಲಕ್' ನಾಟಕದಲ್ಲಿ ಧರ್ಮ ಮತ್ತು ರಾಜಕಾರಣದ ಸಂಘರ್ಷ. *10*

(c) 'ಧರ್ಮಕೊಂಡದ ಕಥೆ' ಯಲ್ಲಿ ಧರ್ಮಶಾಸ್ತ್ರದ ಕ್ರೌರ್ಯ. *10*

(d) 'ದೇವರು' ಕೃತಿಯಲ್ಲಿನ ದೇವರನ್ನು ಕುರಿತ ನಂಬಿಕೆಗಳು. *10*

(e) 'ಜನಪದ ಗೀತಾಂಜಲಿ' ಶೀರ್ಷಿಕೆಯ ಔಚಿತ್ಯ. *10*

**Q6.** (a) ನವೋದಯ ಮತ್ತು ನವ್ಯ ಕವಿತೆಯ ಸ್ವರೂಪ ಮತ್ತು ತಾತ್ತ್ವಿಕತೆಗಳಲ್ಲಿನ ವ್ಯತ್ಯಾಸಗಳನ್ನು ಉದ್ಧೃತಗಳೊಂದಿಗೆ ಸ್ಪಷ್ಟಪಡಿಸಿ. *20*

(b) ದಲಿತರ ಬದುಕಿನ ದಾರುಣ ಚಿತ್ರ ಹಾಗೂ ಅವರ ಜೀವನಪ್ರೀತಿ 'ಒಡಲಾಳ'ದಲ್ಲಿ ಹೇಗೆ ಮೂಡಿ ಬಂದಿದೆ ? ವಿಶದಪಡಿಸಿರಿ. *20*

(c) 'ಶೂದ್ರ ತಪಸ್ವಿ' ನಾಟಕವು ಪೌರಾಣಿಕವಾದರು ಅದು ಪ್ರಸ್ತುತ ಆಧುನಿಕ ಸಮಾಜದ ಅಸಮಾನತೆಗಳನ್ನು ಹೇಗೆ ಗುರುತಿಸುತ್ತದೆ ? ವಿಮರ್ಶಿಸಿ. *10*

**Q7.** (a) 'ಮಾಧವಿ' ಎದುರಿಸುವ ಸಾಮಾಜಿಕ, ಲೈಂಗಿಕ ಮತ್ತು ಮಾನಸಿಕ ಹಿಂಸೆಯ ಸ್ವರೂಪ ವೆಂಥಾದ್ದು ? ಕಾದಂಬರಿಯ ಅಂತ್ಯವು ಸಮರ್ಥನೀಯದೆ ? ವಿಶ್ಲೇಷಿಸಿ. *20*

(b) 'ಬೀದಿ ಮಕ್ಕಳು ಬೆಳೆದೋ' ಕೃತಿಯಲ್ಲಿನ ಗಾದೆಗಳು ಒಳಗೊಂಡ ಜನತೆಯ ಜೀವನಾನುಭವ ಹಾಗೂ ಸಾಮಾಜಿಕ ಚಿಂತನೆಗಳನ್ನು ವಿಶದಪಡಿಸಿರಿ. *20*

(c) ಎ.ಎನ್. ಮೂರ್ತಿರಾವ್ ಅವರು ದೇವರ ಅಸ್ತಿತ್ವದ ಬಗೆಗೆ ತಾಳಿದ ವೈಚಾರಿಕ ನಿಲುವುಗಳಾವುವು ? 'ದೇವರು' ಕೃತಿಯ ಹಿನ್ನೆಲೆಯಲ್ಲಿ ನಿರೂಪಿಸಿರಿ. *10*

**Q8.** (a) ‘ಕನ್ನಡ ಜನಪದ ಕಥೆಗಳು’ ಕೃತಿಯಲ್ಲಿನ ಹಾಸ್ಯಕಥೆಗಳ ಸ್ವಾರಸ್ಯ ಮತ್ತು ವೈಶಿಷ್ಟ್ಯವನ್ನು ಸೋದಾಹರಣವಾಗಿ ವಿಶದಪಡಿಸಿರಿ. *20*

(b) ಬುದ್ಧಿಯ ಕಸರತ್ತು ಮತ್ತು ಭಾಷಾ ಚಮತ್ಕಾರಗಳ ಸಮ್ಮಿಳನದಿಂದ ಒಗಟುಗಳು ಹೇಗೆ ರೂಪು ಪಡೆಯುತ್ತವೆಯೆಂಬುದನ್ನು ನಿಮಗೆ ಇಟ್ಟಿರುವ ಪಠ್ಯದಲ್ಲಿನ ಉದಾಹರಣೆಗಳೊಂದಿಗೆ ಸ್ಪಷ್ಟಪಡಿಸಿರಿ. *20*

(c) ‘ಜಾನಪದ ಸ್ವರೂಪ’ ವು ಕನ್ನಡ ಜಾನಪದ ಅಧ್ಯಯನಕ್ಕೆ ಮುನ್ನುಡಿ ಬರೆದ ಕೃತಿಯಾಗಿದೆ – ಈ ಹೇಳಿಕೆಯ ಔಚಿತ್ಯವನ್ನು ಪರಾಮರ್ಶಿಸಿರಿ. *10*